✆ Off : 26613091 / 26607167
42103360 / 26761877
Email : kea@kea.co.in
Web : www.kea.co.in

# KARNATAKA EMPLOYERS' ASSOCIATION

NO.74, 2nd FLOOR, SHANKARA ARCADE, VANIVILAS ROAD, BASAVANAGUDI
BENGALURU - 560 004
Reg. No. TU 507 / 20-3-1962

Date : 28-01-2017

CIRCULAR No.14/2017

To
All Members of the Association

**Sub: Revision of Minimum Wages for Employment in Construction & Maintenance of Roads & Buildings**

1. The Government of Karnataka in exercise of the powers conferred on it under section 3(1)(b) of the Minimum Wages Act has issued notification dated: 06.01.2017 revising the Minimum Wages payable in respect of scheduled employment in Construction & Maintenance of Roads & Buildings. The minimum wages have been increased substantially and the notification does not specify upto what points of Consumer Price Index the revised wages is linked.

2. The increase in Minimum Wages is from 06.01.2017 and what is specifiedin the notification is only revised in Basic Wages and VDA payable will have to be added. The revised the minimum wages is given below:

| Sl. No. | Category of employment | After revision in terms of notification dated:1.1.2017 | | |
|---|---|---|---|---|
| | | Zone - 1 | Zone-2 | Zone-3 |
| 1 | Skilled | Daily Rs.405.00<br>Monthly Rs.10530/- | Daily Rs.395.00<br>Monthly Rs.10270/- | Daily Rs.375.00<br>Monthly Rs.9750/- |
| 2 | Semi-skilled | Daily Rs.395.00<br>Monthly Rs.10270/- | Daily Rs.385.00<br>Monthly Rs.10010/- | Daily Rs.360.00<br>Monthly Rs.9360/- |
| 3 | Un-skilled | Daily Rs.385.00<br>Monthly Rs.10010/- | Daily Rs.375.00<br>Monthly Rs.9750/- | Daily Rs.350.00<br>Monthly Rs.9100/- |

3. The VDA Payable is over and above the Basic Wages. However, the notification stipulates that VDA payable shall have to be determined on the basis of CPI points for the year 2015 and VDA payable shall be over and above 5780 points. CPI points which has been given as 5780 is for the year 2013. The increase in CPI Points from 2013 onwards is as under:

| Year | CPI Points | VDA payable during the year | Difference of CPI points for the year |
|---|---|---|---|
| 2013 | 5780 | 1.4.2014 to 31.3.2015 | 705 |
| 2014 | 6205 | 1.4.2015 TO 31.3.2016 | 730 |
| 2015 | 6537 | 1.4.2016 TO 31.3.2017 | 332 |

From the above, it is clear that the CPI Points mentioned is not for the year 2015, but for the year 2013. In accordance with the Notification itself, VDA payable for the period from 1.4.2016 to 31.3.2017 shall have to be determined on the basis of CPI Points for the year 2015. The CPI Points for the year 2014 was 6205 and for the year 2015 it was 6537.

Thus, there is obviously typographical error. KEA has taken up the matter with the Commissioner of Labour for issuing necessary correction in accordance with the provisions of Section 10 of the Minimum Wages Act.

4. Changes of the notification stipulate that even if wages paid is more than the minimum wages, VDA as and when revised should be paid. Clause IIstipulates that the prescribed basic wages and VDA shall be paid under the respective components. Other guidelines as contained in the earlier notification have remain unchanged. The members who are covered under the above notification may ensure that revised minimum wages are paid with effect from the date of notification i.e. 6.1.2017.

5. A copy of the notification has been uploaded in the KEA website.

**for KARNATAKA EMPLOYERS' ASSOCIATION**

**sd/-**
**(B.C. PRABHAKAR)**
**PRESIDENT**

# ಕರ್ನಾಟಕ ಸರ್ಕಾರ

ಸಂಖ್ಯೆ: ಕಾಇ 2 ಎಲ್‌ಎಂಡಬ್ಲ್ಯೂ 2015

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ:06-01-2017

## ಅಧಿಸೂಚನೆ

ಕರ್ನಾಟಕ ರಾಜ್ಯಾದ್ಯಂತ **"ರಸ್ತೆಗಳ ನಿರ್ಮಾಣ ಅಥವಾ ನಿರ್ವಹಣಾ ಮತ್ತು ಕಟ್ಟಡಗಳ ನಿರ್ಮಾಣ"** ಅನುಸೂಚಿತ ಉದ್ದಿಮೆಯಲ್ಲಿ ಯಾವುದೇ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ಕೆಳಕಂಡ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವಂತೆ ಕನಿಷ್ಠ ವೇತನವನ್ನು ಪರಿಷ್ಕರಿಸಲು ಸರ್ಕಾರದ ಕರಡು ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯಪತ್ರದ ಭಾಗ-4ಎ ರಲ್ಲಿ ದಿನಾಂಕ:14-01-2016ರಂದು ಪ್ರಕಟಿಸಿ, 1948ರ ಕನಿಷ್ಠ ವೇತನ ಕಾಯ್ದೆಯ (ಕೇಂದ್ರ ಕಾಯ್ದೆ ಸಂಖ್ಯೆ: XI) ಕಲಂ 5ರ ಉಪಕಲಂ 1ರ (ಬಿ) ಖಂಡದ ಮೇರೆಗೆ ಬಾಧಿತರಾಗುವ/ಸಂಬಂಧಪಡುವ ವ್ಯಕ್ತಿಗಳ ಗಮನಕ್ಕೆ ತರಲಾಗಿದ್ದು, ಅವರಿಂದ ಸಲಹೆ/ಆಕ್ಷೇಪಣೆಗಳನ್ನು ಸ್ವೀಕರಿಸಲು ಎರಡು (2) ತಿಂಗಳ ಕಾಲಾವಕಾಶವನ್ನು ನೀಡಲಾಗಿತ್ತು. ಸ್ವೀಕೃತಗೊಂಡ ಸಲಹೆ/ಆಕ್ಷೇಪಣೆಗಳು ಮತ್ತು ಕರಡು ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಮುಂದೆ ಮಂಡಿಸಲಾಗಿತ್ತು. ಸದರಿ ಮಂಡಳಿಯಲ್ಲಿ ಸರ್ಕಾರದ ಪ್ರಸ್ತಾವನೆಯನ್ನು ಸುಧೀರ್ಘವಾಗಿ ಸಮಾಲೋಚಿಸಿ ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಮಂಡಳಿಯು ಸರ್ಕಾರಕ್ಕೆ ತನ್ನ ಶಿಫಾರಸ್ಸನ್ನು ನೀಡಿರುತ್ತದೆ.

ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಶಿಫಾರಸ್ಸನ್ನು ಗಣನೆಗೆ ತೆಗೆದುಕೊಂಡು, ಹಾಗೂ ಪ್ರಸ್ತುತ ವಿದ್ಯಮಾನಗಳನ್ನು ಪರಿಗಣಿಸಿ, 1948ರ ಕನಿಷ್ಠ ವೇತನ ಕಾಯ್ದೆಯ (ಕೇಂದ್ರ ನಿಯಮ ಸಂಖ್ಯೆ: XI)ಕಲಂ 3ರ ಉಪಕಲಂ (1)ರ (ಬಿ) ಖಂಡ ಹಾಗೂ ಕಲಂ 5ರ ಉಪಕಲಂ (1)ನೇ (ಬಿ)ಖಂಡದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಮತ್ತು ಈ ಹಿಂದಿನ ಎಲ್ಲಾ ಅಧಿಸೂಚನೆಗಳನ್ನು ರದ್ದುಪಡಿಸಿ, ಕರ್ನಾಟಕ ರಾಜ್ಯಾದ್ಯಾಂತ **"ರಸ್ತೆಗಳ ನಿರ್ಮಾಣ ಅಥವಾ ನಿರ್ವಹಣಾ ಮತ್ತು ಕಟ್ಟಡಗಳ ನಿರ್ಮಾಣ"** ಉದ್ದಿಮೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಈ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಅನ್ವಯವಾಗುವಂತೆ ಕನಿಷ್ಠ ವೇತನವನ್ನು ಈ ಅಧಿಸೂಚನೆಯ ಅನುಸೂಚಿಯಲ್ಲಿ ಇರುವಂತೆ ಪರಿಷ್ಕರಿಸಲಾಗಿದೆ.

## ಅನುಸೂಚಿ

| ಕ್ರ ಸಂ | ಕೆಲಸದ ವರ್ಗಗಳು | ಕನಿಷ್ಠ ವೇತನ ದರಗಳು [ಲೋಕೋಪಯೋಗಿ ಇಲಾಖೆಯ ವೇತನ ಶ್ರೇಣಿಗಳಲ್ಲಿ ರೂ. 100-00ಗಳನ್ನು ಕಡಿತಗೊಳಿಸಿ (ಕನಿಷ್ಠ ವೇತನ)] |
|---|---|---|
| 1. | ಇಂಜಿನಿಯರಿಂಗ್ ಪದವೀಧರ ನೌಕರ | **22,700-00** |
| 2. | ಇಂಜಿನಿಯರಿಂಗ್ ಡಿಪ್ಲೊಮಾ ನೌಕರ | **17,550-00** |

| ಕ್ರ ಸಂ | ಕೆಲಸದ ವರ್ಗಗಳು | ಕನಿಷ್ಠ ವೇತನ ದರಗಳು | | | | | |
|---|---|---|---|---|---|---|---|
| | | ವಲಯ-1 | | ವಲಯ-2 | | ವಲಯ-3 | |
| | | ದಿನಕ್ಕೆ | ಮಾಸಿಕ | ದಿನಕ್ಕೆ | ಮಾಸಿಕ | ದಿನಕ್ಕೆ | ಮಾಸಿಕ |
| 1 | 2 | 3 | 4 | 5 | 6 | 7 | 8 |
| | **ಅತಿ ಕುಶಲ** | | | | | | |
| 1 | ಅಕ್ಷರಸ್ಥ ಕೂಲಿ | 425-00 | 11050-00 | 415-00 | 10790-00 | 385-00 | 10010-00 |

| | | | | | | | |
|---|---|---|---|---|---|---|---|
| ಕುಶಲ | | | | | | | |
| 1. | ಕಮ್ಮಾರ | | | | | | |
| 2. | ಕಲ್ಲು ಕಡಿಯುವವ | | | | | | |
| 3. | ಗಾರೆ, ಇಟ್ಟಿಗೆ ಕೆಲಸದವ (Iನೇ ದರ್ಜೆ) | | | | | | |
| 4 | ಬಡಗಿ (Iನೇ ದರ್ಜೆ) | | | | | | |
| 5. | ಕೊಳಾಯಿಯವ (ಪ್ಲಂಬರ್) | | | | | | |
| 6. | ತವರದ ಕೆಲಸದವ | | | | | | |
| 7. | ಮುಖ್ಯ ಕೆಲಸಗಾರ (ಫೋರ್‌ಮನ್) | | | | | | |
| 8. | ಸರಂಗ್ | | | | | | |
| 9. | ಬಣ್ಣ ಬಳಿಯುವವ (ಪೈಂಟರ್) | | | | | | |
| 10. | ಫಿಟ್ಟರ್ (Iನೇ ದರ್ಜೆ) | | | | | | |
| 11. | ಮೆಕ್ಯಾನಿಕ್ (Iನೇ ದರ್ಜೆ) | | | | | | |
| 13 | ವಾಯು ಬೈರಿಗೆ ಯಂತ್ರ ಚಾಲಕ | | | | | | |
| 14 | ಯಂತ್ರ ಚಾಲಕ | | | | | | |
| 15 | ಗ್ಯಾಸ್‌ನಿಂದ ಅಥವಾ ವಿದ್ಯುತ್‌ನಿಂದ ಬೆಸುಗೆ ಹಾಕುವವ | | | | | | |
| 16 | ಅಳತೆ ಮಾಪಕವನ್ನು ಸರಿ ಮಾಡುವವ (ಗೇಜ್ ರಿಫೇರರ್) | 405–00 | 10530–00 | 395–00 | 10270–00 | 375–00 | 9750–00 |
| 17 | ಪ್ರಯೋಗಾಲಯದ ಸಹಾಯಕ | | | | | | |
| 18 | ಮೆಷಿನ್ ಆಪರೇಟರ್ | | | | | | |
| 19 | ಚರಕಿಯವ (ಟರ್ನರ್) | | | | | | |
| 20 | ಬೆಸುಗೆಯವ (ವೆಲ್ಡರ್) | | | | | | |
| 21 | ಕ್ರೇನ್ ಚಾಲಕ | | | | | | |
| 22 | ಕಲ್ಲು ಜಜ್ಜುವವ | | | | | | |
| 23 | ಭಾರಿ ಸುತ್ತಿಗೆ ಕೆಲಸದವ | | | | | | |
| 24 | ಸಿಡಿಸುವವ | | | | | | |
| 25 | ಕಲ್ಲಿನ ಕೆಲಸದವ (ಸ್ಟೋನ್ ಕ್ರಷರ್) | | | | | | |
| 26 | ನೆಲ ನುಣುಪುಗೊಳಿಸುವವ (ಪಾಲಿಷ್ ಮಾಡುವವ) | | | | | | |
| 27 | ಕೆಟ್ಟೊಳೆ ಹೊಡೆಯುವವ (ರಿವಿಟ್ಟರ್) | | | | | | |
| 28 | ಗಾರೆಯವ | | | | | | |
| 29 | ನುಣುಪುಗಾರ | | | | | | |
| 30 | ಪಂಪ್ ಚಾಲಕ | | | | | | |

| | | | | | | | |
|---|---|---|---|---|---|---|---|
| 31 | ಕಲ್ಲು ನುಣುಪುಗೊಳಿಸುವವ | | | | | | |
| 32 | ಸರಳು ಬಗ್ಗಿಸುವವ | | | | | | |
| 33 | ಕಲ್ಲಿನಲ್ಲಿ ಕಟ್ಕೊಳೆ ಹೊಡೆಯುವವ (ಸ್ಟೋನ್ ರಿವಿಟ್ಮೆಂಟ್ ಬಿಲ್ಡರ್) ವಿದ್ಯುತ್ ಶಾಸ್ತ್ರಜ್ಞ (ಎಲೆಕ್ಟ್ರೀಷಿಯನ್) | | | | | | |
| 34 | ಮೇಸ್ತ್ರಿ ಅಥವಾ ಮೇಲ್ವಿಚಾರಕ, 1ನೇ ದರ್ಜೆಯ ಗುಮಾಸ್ತ | | | | | | |
| 35 | ತೋಟಗಾರಿಕಾ ಸೂಪರ್ ವೈಸರ್ | | | | | | |
| 36 | ಶೋವೆಲ್ ಮತ್ತು ಸ್ತ್ರಾಪರ್ | | | | | | |
| ಅರೆ ಕುಶಲ | | | | | | | |
| 1. | ಪುಡಿಗೊಳಿಸುವವ | | | | | | |
| 2. | ಕಲ್ಲರಗನ್ನು ಚಿಮುಕಿಸುವವ (ಆಸ್ಫಾಲ್ಟ್ ಸ್ಪ್ರೇಯರ್) | | | | | | |
| 3. | ಕೊರೆಯುವವ (ಡ್ರಿಲ್ಲರ್) | | | | | | |
| 4 | ಸವಗಣಿ ಅಥವಾ ಚವಲಿ | | | | | | |
| 5. | ಸುಣ್ಣ ಬಳಿಯುವವ | | | | | | |
| 6. | ಬಣ್ಣ ಬಳಿಯುವವ | | | | | | |
| 7. | ಮರ ಕೊಯ್ಯುವವ | | | | | | |
| -8. | ಜೋಡಕನಿಗೆ ಸಹಾಯಕ | | | | | | |
| 9. | ತೋಟಮಾಲಿ (ಗಾರ್ಡನರ್) | | | | | | |
| 10. | ಅಡಿಗೆಯವ | | | | | | |
| 11. | ಅಗಸ | 395-00 | 10270-00 | 385-00 | 10010-00 | 360-00- | 9360-00 |
| 12. | ಉಸ್ತುವಾರಿ ನೋಡುವವ (ಕೇರ್ ಟೇಕರ್) | | | | | | |
| 13. | ಸುತ್ತಿಗೆ ಕೆಲಸದವ | | | | | | |
| 14. | ಲಿಫ್ಟ್ ಚಾಲಕ | | | | | | |
| 15. | ಬಿದಿರಿನ ಪರದೆ ಮಾಡುವವನು (ಚಿಕ್ ಮೇಕರ್) | | | | | | |
| 16. | ಬಡಗಿಯ ಸಹಾಯಕ | | | | | | |
| 17 | ಗುಂಪು ಕೆಲಸದವ (ಗ್ಯಾಂಗ್‌ಮನ್) | | | | | | |
| 18 | ಅಂಬಿಗ | | | | | | |
| 19 | ಗಡಾರಿ ಕೆಲಸದವ (ಜಂಪರ್ ಮನ್) | | | | | | |
| 20 | ಇಟ್ಟಿಗೆ ಮಾಡುವವ | | | | | | |
| 21 | ಕಲ್ಲರಗು ಕಾಯಿಸುವವ | | | | | | |
| 22 | ಸುಣ್ಣಕಲ್ಲು ಸುಡುವವ | | | | | | |

| | | | | | | | |
|---|---|---|---|---|---|---|---|
| 23 | ಗಾರೆ ಮತ್ತು ಇಟ್ಟಿಗೆ ಕೆಲಸದವ (2ನೇ ದರ್ಜೆ) | | | | | | |
| 24 | ಬಡಗಿ (2ನೇ ದರ್ಜೆ) | | | | | | |
| 25 | ಫಿಟ್ಟರ್ (2ನೇ ದರ್ಜೆ) | | | | | | |
| 26 | ಮೆಕ್ಯಾನಿಕ್ (2ನೇ ದರ್ಜೆ) | | | | | | |
| 27 | ವಿದ್ಯುತ್ತಂತಿ ಕೆಲಸದವ (ವೈರ್ ಮೆನ್/ ಗುಮಾಸ್ತ ದರ್ಜೆ) | | | | | | |
| 28 | ಸ್ಟೋನ್ ವಡ್ಡರ್ | | | | | | |
| 29 | ಡೀಸರ್ ಕಂಪ್ರೆಸರ್ ಆಪರೇಟರ್ | | | | | | |
| 30 | ಫೈರ್‌ಮೆನ್ ಇನ್ ಬ್ರಿಕ್ ಪ್ಲಾಂಟ್ಸ್ | | | | | | |
| 31 | ಮಾಲಿ ತರಬೇತಿ ಪಡೆದ ಸರ್ಟಿಫಿಕೇಟ್ ಹೊಂದಿರುವವರು | | | | | | |
| 32 | ಬಿಸಿ ಸಹಿತ ವಾಟರ್ ಬ್ಯಾಗ್ | | | | | | |
| 33 | ಆರ್ಟಿಕಲ್ಚರಲ್ ಗಾರ್ಡನರ್ | | | | | | |
| 34 | ಗ್ಲೇಯರ್ | | | | | | |
| 35 | ಪಟ್ಕಾರಿಗಳು | | | | | | |
| 36 | ಟೈಲ್ ಲೇಯರ್ (ಗ್ಲೇಸ್ಡ್ ಮೊಸ್ಯಾಯಿಕ್ ಟೈಲ್ಸ್ ಇತರೆ) | | | | | | |
| 37 | ಮೇಸ್ ಮ್ಯಾನ್ | | | | | | |
| 38 | ಟ್ರೇಸರ್ (ಸರ್ಟಿಫಿಕೇಟ್ ಹೊಂದಿರುವವರು) | | | | | | |
| | **ಅಕುಶಲ** | | | | | | |
| 1 | ಕುಶಲಿಯಲ್ಲದ (ಭಾರದ ಕೆಲಸ) | | | | | | |
| 2 | ಕುಶಲಿಯಲ್ಲದ (ಹಗುರ ಕೆಲಸ) | | | | | | |
| 3 | ವಾಚ್‌ಮನ್ | 385-00 | 10010-00 | 375-00 | 9750-00 | 350-00 | 9100-00 |
| 4 | ಸ್ವೀಪರ್ / ಸ್ಕ್ಯಾವೆಂಜರ್ | | | | | | |
| 5 | ಬಿಲ್ಲೋವರ್ | | | | | | |
| 6 | ಮುಖ್ಯ ಮಜ್ದೂರ್ | | | | | | |
| 7 | ಬ್ಲೂ ಪ್ರಿಂಟರ್ | | | | | | |
| | **ಚಾಲಕ / ಕ್ಲೀನರ್** | | | | | | |
| 1 | ಲಾರಿ/ ಬಸ್ಸು/ರೋಡ್ ರೋಲರ್ ಡ್ರೈವರ್ | 449-00 | 11674-00 | 437-00 | 11362-00 | 407-00 | 10582-00 |
| 2 | ವಾಹನ ನಿರ್ವಾಹಕ | 425-00 | 11050-00 | 415-00 | 10790-00 | 390-00 | 10140-00 |
| 3 | ಕಾರ್/ಜೀಪ್/ಆಸ್ಪತ್ರೆ ವಾಹನ ಡ್ರೈವರ್ | 421-00 | 10946-00 | 410-00 | 10660-00 | 385-00 | 10010-00 |
| 4 | ಲಾರಿ/ ಬಸ್ಸು/ಕಾರ್/ ಜೀಪ್ | 385-00 | 10010-00 | 375-00 | 9750-00 | 350-00 | 9100-00 |

| | | | | | | | |
|---|---|---|---|---|---|---|---|
| | ಕ್ಲೀನರ್ | | | | | | |
| 5 | ಒಂದೆತ್ತಿನ ಗಾಡಿಯವ | | | | | | |
| 6 | ಜೋಡಿ ಎತ್ತುಗಳ ಗಾಡಿಯವ | | | | | | |

| ಕಛೇರಿ ಸಿಬ್ಬಂದಿ | | | | | | | |
|---|---|---|---|---|---|---|---|
| 1. | ಮ್ಯಾನೇಜರ್/ ಪರ್ಸನಲ್ ಆಫೀಸರ್ | 515-00 | 13390-00 | 500-00 | 13000-00 | 465-00 | 12090-00 |
| 2. | ಅಸಿಸ್ಟೆಂಟ್ ಮ್ಯಾನೇಜರ್ / ಅಸಿಸ್ಟೆಂಟ್ ಪರ್ಸನಲ್ ಮ್ಯಾನೇಜರ್ | 495-00 | 12870-00 | 480-00 | 12480-00 | 450-00 | 11700-00 |
| 3. | ಅಕೌಂಟೆಂಟ್ | 475-00 | 12350-00 | 465-00 | 12090-00 | 435-00 | 11310-00 |
| 4. | ಕ್ಯಾಷಿಯರ್/ಸೀನಿಯರ್ ಕ್ಲರ್ಕ್ | 465-00 | 12090-00 | 455-00 | 11830-00 | 425-00 | 11050-00 |
| 5. | ಶೀಘ್ರಲಿಪಿಗಾರ/ ಕಂಪ್ಯೂಟರ್ ಆಪರೇಟರ್ | | | | | | |
| 6. | ಸ್ಟೋರ್ ಕೀಪರ್/ ಟೆಲಿಫೋನ್ ಆಪರೇಟರ್ | | | | | | |
| 7. | ಬೆರಳಚ್ಚುಗಾರ/ಡಾಟಾ ಎಂಟ್ರಿ ಆಪರೇಟರ್ | 460-00 | 11960-00 | 445-00 | 11570-00 | 420-00 | 10920-00 |
| 8. | ಗುಮಾಸ್ತ/ಜೂನಿಯರ್ ಕ್ಲರ್ಕ್ | | | | | | |
| 9. | ವಾಚ್‌ಮನ್/ ಸೆಕ್ಯೂರಿಟಿ ಗಾರ್ಡ್ | 398-00 | 10348-00 | 385-00 | 10010-00 | 385-00 | 10010-00 |
| 10 | ಆಫೀಸ್‌ಬಾಯ್/ ಸ್ವೀಪರ್/ ಅಟೆಂಡರ್. | 385-00 | 10010-00 | 375-00 | 9750-00 | 350-00 | 9100-00 |

**ತುಟ್ಟಿಭತ್ಯೆ:–**

ತುಟ್ಟಿಭತ್ಯೆ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಮಾಡಲಾಗುತ್ತದೆ. ಹಿಂದಿನ ಕ್ಯಾಲೆಂಡರ್ ವರ್ಷದ 12 ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ಸರಾಸರಿ ಆಧಾರದ ಮೇಲೆ ಏಪ್ರಿಲ್ ಮೊದಲನೇ ದಿನಾಂಕದಂದು ಪ್ರತಿ ವರ್ಷ ಲೆಕ್ಕಾಚಾರ ಮಾಡತಕ್ಕದ್ದು. ಅಲ್ಲದೇ ಗ್ರಾಹಕ ಬೆಲೆ ಸೂಚ್ಯಂಕಗಳ ಸಂಖ್ಯೆಯ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ಲೆಕ್ಕ ಹಾಕಲಾಗುತ್ತದೆ. ಆದ್ದರಿಂದ ಮೊದಲ ಲೆಕ್ಕಾಚಾರವು ಗ್ರಾಹಕ ಬೆಲೆ ಸೂಚ್ಯಾಂಕದ (ಜನವರಿ 2015 ರಿಂದ ಡಿಸೆಂಬರ್ 2015) ಸರಾಸರಿ ಆಧಾರದ ಮೇಲೆ 2016 ಏಪ್ರಿಲ್ 1ನೇ ತಾರೀಖಿನಿಂದ ಜಾರಿಗೆ ಬರುತ್ತದೆ. ಅಂದರೆ, ರಾಜ್ಯ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕ 5780ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ 4 ಪೈಸೆಯಂತೆ ತುಟ್ಟಿ ಭತ್ಯೆ ಪಾವತಿಸತಕ್ಕದ್ದು.

1. ದಿನಗೂಲಿ ಗಳಿಕೆದಾರರ ಸಂದರ್ಭದಲ್ಲಿ ಮಾಸಿಕ ವೇತನ ದರಗಳನ್ನು 26 ದಿನಗಳಿಂದ ವಿಭಾಗಿಸಿ, 4 ರಜಾ ದಿನಗಳಿಗೆ ವೇತನವನ್ನು ನೀಡುವುದೂ ಸೇರಿದಂತೆ ಲೆಕ್ಕ ಹಾಕತಕ್ಕದ್ದು.

ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ:–

ಅ) ಮಾಸಿಕ ವೇತನವನ್ನು ಪಡೆಯುವವರು:– ಪ್ರತಿ ವರ್ಷ ಹೆಚ್ಚಾಗುವ ಸಿ ಪಿ ಐ ಅಂಶಗಳು x ತುಟ್ಟಿಭತ್ಯೆಯ ದರ x 30 ದಿನಗಳು= ತಿಂಗಳ ತುಟ್ಟಿಭತ್ಯೆ

ಆ) ದಿನಗೂಲಿ ವೇತನ ಪಡೆಯುವವರು :–

$$\frac{\text{ಪ್ರತಿ ವರ್ಷ ಹೆಚ್ಚಾಗುವ ಅಂಶಗಳು} \times \text{ತುಟ್ಟಿಭತ್ಯೆಯ ದರ} \times 30}{26} = \text{ದಿನದ ತುಟ್ಟಿಭತ್ಯೆ}$$

2. ಮಹಿಳೆಯರು ಮತ್ತು ಪುರುಷರು ಒಂದೇ ರೀತಿಯ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಉಭಯತ್ರರಿಗೂ ಸಮಾನ ದರದ ವೇತನಗಳನ್ನು ಸಂದಾಯ ಮಾಡತಕ್ಕದ್ದು.

3. ಪ್ರಸ್ತುತ ಪಾವತಿಸುತ್ತಿರುವ ವೇತನ ದರವು ಹೆಚ್ಚಾಗಿದ್ದಲ್ಲಿ ಆ ವೇತನ ದರಗಳನ್ನು ಸಂದಾಯ ಮಾಡುವುದನ್ನು ಮುಂದುವರೆಸತಕ್ಕದ್ದು ಹಾಗೂ ಕಡ್ಡಾಯವಾಗಿ ಕಾಲಕಾಲಕ್ಕೆ ಹೆಚ್ಚಾಗುವ ತುಟ್ಟಿಭತ್ಯೆಯನ್ನು ಸಹ ಪಾವತಿಸತಕ್ಕದ್ದು.

4. ಅಧಿಸೂಚನೆಯಲ್ಲಿ ವರ್ಗವನ್ನು ನಮೂದಿಸದೆ ಇರುವ ವರ್ಗಗಳ ಕಾರ್ಮಿಕರಿಗೆ ಅದೇ ಸ್ವರೂಪದ ಕೆಲಸ ನಿರ್ವಹಿಸುತ್ತಿರುವ ಇತರೆ ವರ್ಗದ ಕಾರ್ಮಿಕರಿಗೆ ಪಾವತಿ ಮಾಡುತ್ತಿರುವ ವೇತನವನ್ನು ಸಂದಾಯ ಮಾಡತಕ್ಕದ್ದು.

5. ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ 8 ಗಂಟೆಗಳ ಕೆಲಸದ ವೇತನವು ಅದೇ ತರಹದ ಕೆಲಸ ಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರಕೂಡದು. ಒಂದು ದಿನದ ಕೆಲಸ ಎಂದರೆ 8 ಗಂಟೆಗಳ ಕೆಲಸ ಎಂದು ತಿಳಿಯತಕ್ಕದ್ದು. ಕಾರ್ಮಿಕರನ್ನು 8 ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ ಅಂತಹ ಕಡಿಮೆ ಅವಧಿಗೆ ಅನುಗುಣವಾಗಿ ವೇತನವನ್ನು ಆ ವರ್ಗದ ದಿನದ ಅಥವಾ ತಿಂಗಳ ವೇತನದ ಆಧಾರದ ಮೇಲೆ ಲೆಕ್ಕ ಹಾಕುವುದು.

6. ದಿನಗೂಲಿ ನೌಕರರಿಗೆ ಅವರ ದಿನದ ವೇತನ ದರಗಳನ್ನು ಕಂಡು ಹಿಡಿಯಬೇಕಾದಲ್ಲಿ ತಿಂಗಳ ವೇತನ ದರವನ್ನು 26 ದಿನಗಳಿಂದ ಭಾಗಿಸಬೇಕು. ಭಾಗಿಸಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸುವುದು.

7. ಸಂಸ್ಥೆಯಲ್ಲಿ ನಿಗದಿಪಡಿಸಿರುವ ವಾರದ ರಜೆ ಅಥವಾ ಹಬ್ಬದ ರಜಾ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಠ ವೇತನ ಕಾಯ್ದೆ ಮತ್ತು ನಿಯಮಗಳಿಗೆ ಒಳಪಟ್ಟು ಸಾಮಾನ್ಯ ವೇತನದ ಎರಡುಪಟ್ಟು ವೇತನವನ್ನು ಪಾವತಿ ಮಾಡತಕ್ಕದ್ದು.

8. ಕೆಲಸಗಾರರು ದಿನದ ನಿಗಧಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ ಅಂತಹ ಹೆಚ್ಚುವರಿ ಅವಧಿ ಕೆಲಸಕ್ಕೆ ಆತನ ವೇತನದ ಎರಡುಪಟ್ಟು ವೇತನವನ್ನು ಪಾವತಿಸತಕ್ಕದ್ದು.

9. ವೇತನ ಲೆಕ್ಕಾಚಾರದಲ್ಲಿ ಚಿಲ್ಲರೆ ಬಂದ ಪಕ್ಷದಲ್ಲಿ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸುವುದು.

10. ಟ್ರೈನಿಗಳಿಗೆ ಆ ವರ್ಗದ ನೌಕರರು ಪಡೆಯುತ್ತಿರುವ ವೇತನದ ಪ್ರತಿಶತ 75 ರಷ್ಟು ವೇತನವನ್ನು ಶಿಷ್ಯ ವೇತನವನ್ನಾಗಿ ಪಾವತಿಸತಕ್ಕದ್ದು.

11. ಈ ಅಧಿಸೂಚನೆಯಲ್ಲಿ ನಿಗಧಿಪಡಿಸಿರುವ ವೇತನ ದರಗಳನ್ನು ಮತ್ತು ಕಾಲಕಾಲಕ್ಕೆ ಹೆಚ್ಚಾಗುವ ತುಟ್ಟಿಭತ್ಯೆಯನ್ನು ಆಯಾ ಅಂಕಣಗಳಲ್ಲಿಯೇ ನಮೂದಿಸಿ ಪಾವತಿ ಮಾಡತಕ್ಕದ್ದು.

12. ನೌಕರರುಗಳ ವೇತನವನ್ನು ಚೆಕ್ ಮೂಲಕ ಪಾವತಿಸುವುದು ಅಥವಾ ನೌಕರರ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡತಕ್ಕದ್ದು.

| | | |
|---|---|---|
| ವಲಯ-1 | : | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ರಾಜ್ಯದ ಎಲ್ಲಾ ಮಹಾನಗರಪಾಲಿಕೆಗಳು ಮತ್ತು ಇವುಗಳಿಗೆ ಗೊತ್ತುಪಡಿಸಿದ ಆಗ್ಲೋಮರೇಷನ್ ಪ್ರದೇಶಗಳು |
| ವಲಯ-2 | : | ವಲಯ-1ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳು. |
| ವಲಯ-3 | : | ವಲಯ-1 ಮತ್ತು 2 ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಇತರೆ ಭಾಗಗಳು. |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

A. N. Radha... 6/01/2017

[ಎ.ಎನ್.ರಾಧಾಮಣಿ]
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ.

ಇವರಿಗೆ,

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ ಈ ಅಧಿಸೂಚನೆಯನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಸದರಿ ಪ್ರಕಟಣೆಯ 200 ಪ್ರತಿಗಳನ್ನು ಸರ್ಕಾರದ ಅಧೀನ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, 4ನೇ ಮಹಡಿ, ವಿಕಾಸಸೌಧ, ಬೆಂಗಳೂರು-1 ಇವರಿಗೆ, ಕಳುಹಿಸುವಂತೆ ಕೋರಲಾಗಿದೆ.

ಪ್ರತಿಗಳು:-

1. ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29.
2. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ.
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು.
4. ನಿರ್ದೇಶಕರು, ವಾರ್ತಾ ಇಲಾಖೆ, ಶಿವಾಜಿನಗರ, ಬೆಂಗಳೂರು.
5. ಸದಸ್ಯ ಕಾರ್ಯದರ್ಶಿ, ಕರ್ನಾಟಕ ಕನಿಷ್ಠ ವೇತನ ಸಲಹಾ ಮಂಡಳಿ, ಕಾರ್ಮಿಕ ಆಯುಕ್ತರ ಕಚೇರಿ, ಕಾರ್ಮಿಕ ಭವನ, ಬೆಂಗಳೂರು.
6. ಎಲ್ಲಾ ಜಿಲ್ಲೆಗಳ ಕಾರ್ಮಿಕ ಅಧಿಕಾರಿಗಳಿಗೆ (ಕಾರ್ಮಿಕ ಆಯುಕ್ತರ ಮೂಲಕ).
7. ಮಾನ್ಯ ಕಾರ್ಮಿಕ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ವಿಕಾಸಸೌಧ, ಬೆಂಗಳೂರು.
9. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿ.